# Ee Sanje

## Postal stamp in L.V. prasad Memory

clip 1 Edition: Bangalore Clip Date: 12-September-2006 Page No: 7 Clip Height/Width: 6 cm/13 cm


# ಎಲ್.ವಿ.ಪ್ರಸಾದ್ ಸ್ಮರಣಾರ್ಥ ಅಂಚೆಚೀಟಿ ಬಿಡುಗಡೆ

ಬೆಂಗಳೂರು, ಸೆ.11- ಭಾರತ ಸರ್ಕಾರದ ಅಂಚೆ ಇಲಾಖೆ ಪ್ರಸಾದ್ ಗ್ರೂಪ್‌ನ ಎಲ್.ವಿ.ಪ್ರಸಾದ್ ಅವರು ಸಿನಿಮಾ ಪ್ರಪಂಚಕ್ಕೆ ನೀಡಿದ ಅತ್ಯದ್ಭುತ ಕೊಡುಗೆಯ ಸ್ಮರಣಾರ್ಥ ಅಂಚೆ ಚೀಟಿಯನ್ನು ಹೈದರಾಬಾದ್‌ನಲ್ಲಿ ಬಿಡುಗಡೆ ಮಾಡಿದೆ.

ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನದ ಕೇಂದ್ರ ಸಚಿವ ಡಾ.ಶಕೀಲ್ ಅಹಮದ್ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು. ಕೇಂದ್ರ ಕಲ್ಲಿದ್ದಲು ರಾಜ್ಯ ಸಚಿವ ಡಾ.ದಾಸರಿ ನಾರಾಯಣರಾವ್ ಮೊದಲ ಆಲ್ಬಂ ಸ್ವೀಕರಿಸಿದರು.

ಡಾ.ಶಕೀಲ್ ಅಹಮದ್ ಅವರು ಮಾತನಾಡಿ, ಎಲ್.ವಿ.ಪ್ರಸಾದ್ ಅವರು ತೆಲುಗು ಟಾಕಿಯ ಪ್ರಥಮ ತಾರೆ ಎಂದು ಅವರನ್ನು ಪ್ರಶಂಸಿಸಿದರು.

ಭಾರತೀಯ ಸಿನಿಮಾಗೆ ತಮ್ಮ ತಂದೆ ನೀಡಿದ ಕೊಡುಗೆಯನ್ನು ಗುರುತಿಸಿದ್ದಕ್ಕಾಗಿ ಸರಕಾರವನ್ನು ಎಲ್.ವಿ.ಪ್ರಸಾದ್ ಅವರ ಮಗ ರಮೇಶ್ ಪ್ರಸಾದ್ ಅವರು ಶ್ಲಾಘಿಸಿದರು.

ಎಲ್.ವಿ.ಪ್ರಸಾದ್ ಅವರ ವ್ಯಕ್ತಿಪರತೆ ಕುರಿತ ಚಿತ್ರವನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಕಮಲಹಾಸನ್ , ಡಿಎಎಸ್ ರಾಜು ಮತ್ತು ರಾಮೋಜಿರಾವ್ ಸೇರಿದಂತೆ ಪ್ರಖ್ಯಾತ ಚಿತ್ರತಾರೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಲ್ಲದೆ, ಹಲವು ಚಿತ್ರನಟರು ಹಾಗೂ ಸರಕಾರಿ ಅಧಿಕಾರಿಗಳು ಪಾಲ್ಗೊಂಡಿದ್ದರು.